ಬೆಂಬಲ ಇದೆ. ಅದರ ಬಗ್ಗೆಯೂ ಸಹ ತಾವು ಚರ್ಚೆ ನಡೆಸಲು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು:– ನೀವು ತಂದಿರುವ ನಿಲುವಳಿ ಸೂಚನೆ ಏನಿದೆ, ಆ ಬಗ್ಗೆ ಹೇಳಿ.

2. ನಿಲುವಳಿ ಸೂಚನೆ

(ಮಂಡನೆಗೆ ಅನುಮತಿ ಕೋರಿ ಚರ್ಚೆ)

ವಿಷಯ: ರಾಜ್ಯದ 13 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ 15000 ಮೆಟ್ರಿಕ್ ಟನ್ ಹಾಲಿನ ಪುಡಿ ದಾಸ್ತಾನಿರುವುದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿರುವ ಬಗ್ಗೆ.

ಶ್ರೀ ವೈ.ಎಸ್.ವಿ. ದತ್ತಾ (ಕಡೂರು):– ಮಾನ್ಯ ಅಧ್ಯಕ್ಷರೆ, ಈಗ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ತರಹದಲ್ಲಿ ಇನ್ನೊಂದು ದೊಡ್ಡ ಸಮಸ್ಯೆ ಹಾಲು ಉತ್ಪಾದಕರ ಕೊರಳಿಗೆ ಬಂದಿದೆ. ನಾಳೆ ಅಥವಾ ನಾಡಿದ್ದರಿಂದ ಹಾಲು ಉತ್ಪಾದಕರ ಆತ್ಮಹತ್ಯೆ ಆಗಬಾರದೆಂಬ ಆತಂಕಕ್ಕೋಸ್ಕರ ನಾವು ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ರಾಜ್ಯದಲ್ಲಿ 72 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಆದರೆ ದುರಂತವೆಂದರೆ, ಸುಮಾರು 25 ಲಕ್ಷ ಲೀಟರ್ ಹಾಲು ಹೊರರಾಜ್ಯಗಳಿಗೆ ಸಾಗಾಣಿಕೆಯಾಗಿ, ಅಲ್ಲಿಂದ ಹಾಲಿನಪುಡಿ, ಬೆಣ್ಣೆಯಾಗಿ ಪರಿವರ್ತನೆಯಾಗಿ ಬರುತ್ತಿದೆ. 13 ಹಾಲು ಒಕ್ಕೂಟಗಳು ಇವತ್ತಿನ ದಿವಸ ತೀವ್ರ ನಷ್ಟದಲ್ಲಿವೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಹಾಲು ಉತ್ಪಾದಕರಾಗಿ ಗೌಳಿಗರು ಇದ್ದಾರೆ, ಅವರಿಗೆ ಒಂದು ಲೀಟರ್‌ಗೆ 4 ರೂ.ಗಳ ದರದಲ್ಲಿ ಕಡಿತವಾಗಿದೆ. ಇವತ್ತು ಹಾಲು ಉತ್ಪಾದನೆ ಮಾಡುವುದಕ್ಕಾಗಿ ದನ ಸಾಕಿಕೊಂಡಿರುವಂತಹ ಜನರೆಲ್ಲರೂ ಬಹಳ ಕಷ್ಟಕ್ಕೆ ಈಡಾಗಿದ್ದಾರೆ. ಅವರ ಪ್ರೋತ್ಸಾಹಧನದ ಬಾಕಿ ಬಿಡುಗಡೆಯಾಗಿಲ್ಲ. ಮತ್ತೆ ಲೀಟರ್‌ಗೆ ದರವೂ ಸಹ ಕಡಿಮೆಯಾಗಿದೆ.

ಅಧ್ಯಕ್ಷರು:– ಹಾಗಿದ್ದರೆ ಒಂದು ಕೆಲಸ ಮಾಡೋಣ. ನಾನು ಈ ಬಗ್ಗೆ ಚರ್ಚೆ ನಡೆಸಲು ರೂಲ್ 69ರ ಅಡಿಯಲ್ಲಿ ಅವಕಾಶ ಕೊಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:– ಹಾಲು ಉತ್ಪಾದಕರ ಸಮಸ್ಯೆ ಗಂಭೀರವಾಗಿ ಇರುವುದರಿಂದ, ಈ ಬಗ್ಗೆ ದಯವಿಟ್ಟು ತಾವು ಚರ್ಚೆ ಮಾಡುವುದಕ್ಕಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಆಯಿತು, ಈ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಮಾನ್ಯ ಸಭಾಧ್ಯಕ್ಷರು ನಿಲುವಳಿ ಸೂಚನೆ ಮಂಡನೆಗೆ ಅನುಮತಿ ನಿರಾಕರಿಸಿದರು ಮತ್ತು ಸದರಿ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡುವುದಾಗಿ ತಿಳಿಸಿದರು)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ, ಇವತ್ತು ನಾನು ತಂದಿರುವಂತಹ ನಿಲುವಳಿ ಸೂಚನೆ ವಿಷಯವು ಈ ಭಾಗದ ಜನರಿಗೆ ಬಹಳ ಮುಖ್ಯವಾದುದಾಗಿದೆ. ವಿಶೇಷವಾಗಿ ಬೆಳಗಾಂನಲ್ಲಿ ಅಧಿವೇಶನವು ನಡೆಯುತ್ತಿರುವುದರಿಂದ, ಈ ಬಗ್ಗೆ ಚರ್ಚಿಸಬೇಕಾಗಿದೆ. 60 ವರ್ಷಗಳ ಆಡಳಿತದಲ್ಲಿ ಅಭಿವೃದ್ಧಿಯ ಅನುದಾನ ಮತ್ತು ಅಧಿಕಾರದ ಪಾಲುದಾರಿಕೆಯಲ್ಲಿ ಬಹಳ ದೊಡ್ಡ ತಾರತಮ್ಯ ನಡೆಯುತ್ತಿದೆ. ಈ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ತಾವು ಅವಕಾಶವನ್ನು ಮಾಡಿಕೊಡಬೇಕು. ಹೈದರಾಬಾದ್–ಕರ್ನಾಟಕಕ್ಕೆ ಸಂಬಂಧಿಸಿದಂತೆ Article 371(j) ಅನ್ನು ಯಾವ ಉದ್ದೇಶಕ್ಕೋಸ್ಕರ ತರಲಾಗಿತ್ತೋ, ಅದು ಈಡೇರುತ್ತಿಲ್ಲ. ಆ ಭಾಗದವರಿಗೆ ಎಲ್ಲಾ ರೀತಿಯಾದಂತಹ ಅನ್ಯಾಯವು ನಡೆಯುತ್ತಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ರೂಲಿಂಗ್ ಪಾರ್ಟಿಯವರು adjournment motion notice ಕೊಡುತ್ತಾರೆಯೇ?

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಈ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕಾಗಿ ತಾವು ರೂಲ್ 60ರ ಅಡಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕು. ಏಕೆಂದರೆ, ಈ ಭಾಗದ ಸುಮಾರು 52 ಜನ ಶಾಸಕರು

ಪಕ್ಷಾತೀತವಾಗಿ ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಇದರಲ್ಲಿ ಆಡಳಿತ ಪಕ್ಷದ ಸದಸ್ಯರು ಸಹ ಸಹಿ ಮಾಡಿಕೊಟ್ಟಿದ್ದೇವೆ. ಆದ್ದರಿಂದ, ಅದರ ಬಗ್ಗೆ submission ಮಾಡುವುದಕ್ಕೆ ತಾವು ನನಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್ (ಸರ್ಕಾರಿ ಮುಖ್ಯ ಸಚೇತಕರು):– ಮಾನ್ಯ ಅಧ್ಯಕ್ಷರೆ, ನಮ್ಮ ಪಾರ್ಟಿಯಿಂದ ಅವರಿಗೆ permission ಕೊಟ್ಟಿಲ್ಲ. ಅವರು ಎಲ್ಲರ ಹತ್ತಿರ ಸುಳ್ಳು ಹೇಳಿಕೊಂಡು ಸಹಿ ಹಾಕಿಸಿಕೊಂಡಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ. ಅವರನ್ನು ಅಮಾನತ್ತು ಮಾಡಿ.

ಅಧ್ಯಕ್ಷರು:– ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಹೇಳಿದ್ದೇನೆ. ನಾವು ಮತ್ತೆ ಸೋಮವಾರ ಸೇರುತ್ತೇವೆ. ಸೋಮವಾರ ಇದರ ಬಗ್ಗೆ ನೋಡೋಣ. ಏಕೆಂದರೆ, business advisory committee ಯಲ್ಲಿ ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳೆಲ್ಲರೂ ಸೇರಿ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ಇನ್ನೊಂದು ಸಭೆಯನ್ನು ನಾನು ಕರೆಯುತ್ತೇನೆ. ಅವಕಾಶ ಸಿಕ್ಕರೆ, ಇವತ್ತೇ ಕರೆಯುತ್ತೇನೆ, ಇಲ್ಲದಿದ್ದರೆ ಇನ್ನೊಂದು ದಿನ ಕರೆಯುತ್ತೇನೆ. ಸಭೆ ಸೇರಿ ಇದನ್ನು ಯಾವ ರೀತಿಯಾಗಿ ಚರ್ಚೆಗೆ ಒಳಪಡಿಸೋಣ ಎಂದು ತೀರ್ಮಾನ ತೆಗೆದುಕೊಂಡು, ಆ ಪ್ರಕಾರ ಮಾಡೋಣ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ, submission ಮಾಡುವುದಕ್ಕೆ ನನಗೆ 5 ನಿಮಿಷ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಆಗುವುದಿಲ್ಲ, ನಾನು ಈಗಾಗಲೇ ಹೇಳಿದ್ದೇನೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ, ನನಗೆ 5 ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಬೇಕು. ಇದು ಬಹಳ ಮಹತ್ವವಾಗಿರುವಂತಹ ವಿಚಾರವಾಗಿದೆ.

ಶ್ರೀ ಪಿ.ಎಂ. ಅಶೋಕ್:– ನೀವು ಮಾತನಾಡಬೇಡಿ, ಕುಳಿತುಕೊಳ್ಳಿ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ನನಗೆ ಗೊತ್ತಿದೆ, ನೀವು ಮೊದಲು ಕುಳಿತುಕೊಳ್ಳಿ, ನೀವು ಹೇಳಬೇಕಾದ ಅವಶ್ಯಕತೆ ಇಲ್ಲ.

(ಗೊಂದಲ)

ಅಧ್ಯಕ್ಷರು:– ಈಗ ಆಗುವುದಿಲ್ಲ. ನೀವು ಕುಳಿತುಕೊಳ್ಳುತ್ತೀರೋ, ಇಲ್ಲವೋ? Please resume.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ, ನಿಮ್ಮ ಮಾತಿಗೆ ನಾನು ಗೌರವ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಸೋಮವಾರ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಅವರಿಗೆ ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಮಾನ್ಯ ಅಧ್ಯಕ್ಷರೆ, submission ಮಾಡುವುದಕ್ಕೆ ನನಗೆ 5 ನಿಮಿಷ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಅಧ್ಯಕ್ಷರೆ, ಈ ಭಾಗದ ಜನರ ವಿಷಯ ಮಹತ್ತರವಾದುದು.

ಅಧ್ಯಕ್ಷರು:– ನನಗೂ ಗೊತ್ತಿದೆ, ಅದಕ್ಕಾಗಿಯೇ ಅವಕಾಶ ಮಾಡಿಕೊಡುತ್ತೇನೆಂದು ಅವರಿಗೆ ಹೇಳಿದ್ದೇನೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಅಧ್ಯಕ್ಷರೆ, ಈ ಭಾಗದ ಜನರ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಐದು ನಿಮಿಷ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು:– ಇದು ಒಂದೇ ಅಲ್ಲವೇನ್ರಿ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ನನಗೆ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್:– ಅಧ್ಯಕ್ಷರೆ, ಪಾಟೀಲ್‌ರವರು ruling party ಯಲ್ಲಿದ್ದುಕೊಂಡು ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡಬೇಡಿ. ಸಂಬಂಧವಿಲ್ಲದಿದ್ದರೂ ಎಲ್ಲರ ಹತ್ತಿರ ಸುಳ್ಳು ಹೇಳಿ sign ಹಾಕಿಸಿಕೊಂಡಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಅಧ್ಯಕ್ಷರು:– ಸಾಕು, ಬೇಡ, ಬೇಡ, ಆಗುವುದಿಲ್ಲ. ನಿಮಗೆ ಈಗ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಅಧ್ಯಕ್ಷರೇ, ನನಗೆ ಐದು ನಿಮಿಷ ಅವಕಾಶ ಕೊಡಿ. ಈ ಭಾಗದ ಜನರಿಗೆ ಆಗಿರುವಂಥ ಅನ್ಯಾಯಗಳನ್ನು, ಈ ಭಾಗದ ಜನರಿಗೆ ಆಗಿರುವಂಥ ಅಧಿಕಾರದ ತಾರತಮ್ಯವನ್ನು ವಿವರಿಸುತ್ತೇನೆ. ಅನುದಾನ ಬಿಡುಗಡೆ ಮಾಡುವುದರಲ್ಲಿ, ಅಧಿಕಾರದ ಪಾಲುದಾರಿಕೆಯಲ್ಲಿ ಇವತ್ತೇನು ಈ ಭಾಗಕ್ಕೆ ಅನ್ಯಾಯವಾಗುತ್ತಿದೆ,

ಅದನ್ನು ಖಂಡಿತವಾಗಿಯೂ ಜನರಿಗೆ ತಿಳಿಸಲೇಬೇಕಾಗಿದೆ, ಅದಕ್ಕೆ ತಾವು ಅವಕಾಶವನ್ನು ಕೊಡಲೇಬೇಕಾಗಿದೆ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್:– ಇನ್ನೂ ಬೇಕಾದಷ್ಟು ಜನ ಮಾತನಾಡುವವರಿದ್ದಾರೆ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಅಧ್ಯಕ್ಷರೆ, ನಾನು ತಮ್ಮಲ್ಲಿ ಕೈಮುಗಿದು ಕೇಳುತ್ತೇನೆ. ಏಕೆಂದರೆ 60 ವರ್ಷಗಳಿಂದ ನಾವು ಮಲತಾಯಿ ಧೋರಣೆಗೆ ಒಳಗಾಗಿದ್ದೇವೆ. 60 ವರ್ಷಗಳಿಂದ ಕಾಯುತ್ತಿದ್ದೇವೆ. ತಾವು ಇದಕ್ಕೆ ಖಂಡಿತವಾಗಿಯೂ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತೇನೆ. ಹತ್ತು ನಿಮಿಷ ಅವಕಾಶ ಕೊಡಿ.

(ಗೊಂದಲ)

SRI J.T. PATIL:- Point of order sir.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಅಧ್ಯಕ್ಷರೆ, ನಂಜುಂಡಪ್ಪ ವರದಿಯನ್ನು ಸರಿಯಾಗಿ ಅನುಷ್ಠಾನ ಮಾಡಲಿಲ್ಲ. Article 371(J) ಅನ್ನು ಸರಿಯಾಗಿ ಅನುಷ್ಠಾನ ಮಾಡಲಿಕ್ಕೆ ತಯಾರಿಲ್ಲ. ಈ ಭಾಗದ ಸಾಹಿತಿಗಳಿಗೆ, ಈ ಭಾಗದ ಕಲಾವಿದರಿಗೆ, ವಿಶ್ವವಿದ್ಯಾನಿಲಯಗಳಿರಬಹುದು, ಈ ಭಾಗದ ಶಾಸಕರಿಗೂ ಅಧಿಕಾರದಲ್ಲಿ ಪಾಲುದಾರಿಕೆ ಕೊಡಲಿಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಅಪ್ಪಾಜಿ ಎಸ್. ನಾಡಗೌಡ:– ಸಾಹಿತಿ, ಕಲಾವಿದರು ಎಲ್ಲಾ ಗೊತ್ತಿದೆ ಬಿಡ್ರಿ. Sir, ನಾನು Point of order ನಲ್ಲಿದ್ದೀನಿ.

(ಗೊಂದಲ)

ಅಧ್ಯಕ್ಷರು:– ಅವರೇನೋ point of order ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಜೆ.ಟಿ. ಪಾಟೀಲ್:– ಎ.ಎಸ್. ಪಾಟೀಲ್ (ನಡಹಳ್ಳಿ)ಯವರು ನಂಜುಂಡಪ್ಪ ವರದಿಯ ಮೇಲೆ ಚರ್ಚೆಗೆ ಅವಕಾಶ ಕೋರುವ ಪ್ರಸ್ತಾವನೆ ಎಂದು ಹೇಳಿ ನಮ್ಮ ಹತ್ತಿರ ಸಹಿ ಮಾಡಿಸಿಕೊಂಡು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ನಮಗೆ ತಪ್ಪು ಮಾಹಿತಿ ಕೊಟ್ಟು ಸಹಿ ಮಾಡಿಸಿಕೊಂಡಿದ್ದಾರೆ. ದಯಮಾಡಿ ಅವರಿಗೆ ನಿಲುವಳಿ ಸೂಚನೆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬಾರದು. ನಮಗೆ ತಪ್ಪು ಮಾಹಿತಿ ಕೊಟ್ಟು ಸಹಿ ಮಾಡಿಸಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):– ಇದರಲ್ಲಿ ಯಾರಿಗೂ ಸುಳ್ಳು ಹೇಳಿ ಸಹಿ ಮಾಡಿಸಿಕೊಳ್ಳುವುದಕ್ಕಾಗುವುದಿಲ್ಲ. ಇವರೆಲ್ಲರೂ ಓದಿಯೇ ಸಹಿ ಮಾಡಿರುವುದು. ಇದರಲ್ಲಿ ಸುಳ್ಳು ಹೇಳಿ ಸಹಿ ಮಾಡಿಸಿಕೊಳ್ಳುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಒಬ್ಬ ಶಾಸಕರು ಓದದೆ ಸಹಿ ಹಾಕುತ್ತಾರೆ ಎಂದರೆ, ಎಲ್ಲಿಗೆ ಬಂತು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಶಾಸಕರು ಓದದೆ ಸಹಿ ಮಾಡುತ್ತಾರೆ ಎಂದರೆ ಹೇಗೆ?

(ಗೊಂದಲ)

ಶ್ರೀ ಪಿ.ಎಂ. ಅಶೋಕ್:– ಅಧ್ಯಕ್ಷರೆ, ಅವರು ಸುಳ್ಳು ಹೇಳಿ ಸಹಿ ಮಾಡಿಸಿಕೊಂಡಿದ್ದಾರೆ. ದಯವಿಟ್ಟು ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಡಿ. ಈಗ ಎಲ್ಲಾ ಶಾಸಕರು ನಾವು ಸಹಿ ಮಾಡಿರುವುದು ತಪ್ಪು ಎಂದು letter ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಅಪ್ಪಾಜಿ ಎಸ್. ನಾಡಗೌಡ:– I am on point of order. Sir, it is very clear ನಿಲುವಳಿ ಸೂಚನೆ Rule 60 ಕೆಳಗೆ ಕೊಟ್ಟ ನಂತರ ಅದರ maintainability ಬಗ್ಗೆ ಕೆಳಗೆ ಹೇಳಲಾಗಿದೆ. Recent occurrence ಎಂದು ಇದೆ. Whether it is a recent occurrence? ಇಲ್ಲ, ಈಗ ಹಿಂದೆ ಈ ರೀತಿ ಆಗಿದೆ ಎಂದು ಹೇಳುವುದು ಸರಿಯೇ? Sir, it is not a recent occurrence. ಈಗಾಗಲೇ ನೀವು BAC ನಲ್ಲಿ ತೀರ್ಮಾನಿಸಿದಂತೆ ನಂಜುಂಡಪ್ಪ ವರದಿಯ ಮೇಲೆ ಚರ್ಚೆಗೆ ದಿನಾಂಕ ನಿಗದಿಪಡಿಸಿದ್ದೀರಿ. ಅದರಲ್ಲಿ ಹಿಂದುಳಿದಿರುವಂಥ ತಾಲ್ಲೂಕುಗಳ ಬಗ್ಗೆ, ಉತ್ತರ ಕರ್ನಾಟಕದ ಬಗ್ಗೆ, ಹಳೆ ಮೈಸೂರು ಬಗ್ಗೆ ಹಿಂದುಳಿದ ತಾಲ್ಲೂಕುಗಳ ಬಗ್ಗೆ ಏನೆಲ್ಲಾ ಚರ್ಚೆ ಮಾಡಬಹುದು. You have already decided to include in your agenda. ಮುಂದಿನ ಅಜೆಂಡಾದಲ್ಲಿ ಹಾಕಿಕೊಂಡಿದ್ದೀರಿ. ನಿಲುವಳಿ ಸೂಚನೆ ಕೊಡತಕ್ಕಂಥ ಉದ್ದೇಶವೇನು? ಇದು ಬಹಳ ಸ್ಪಷ್ಟವಾಗಿ ನಿಯಮದಲ್ಲಿದೆ. ಆಡಳಿತ ಪಕ್ಷದ ಸದಸ್ಯರು ವಿಶೇಷವಾಗಿ ನಿಲುವಳಿ ಸೂಚನೆ ಕೊಡತಕ್ಕಂಥದ್ದು ಸಂಪ್ರದಾಯವಲ್ಲ. ಇದು ಕೂಡ ನಿಮ್ಮೊಂದಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–ಅದು ನಿಮ್ಮ ಅಭಿಪ್ರಾಯವಾಗಿರಬಹುದು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಸದಸ್ಯರ ಹಕ್ಕನ್ನು ಏಕೆ ಮೊಟಕುಗೊಳಿಸುತ್ತೀರಿ?

(ಗೊಂದಲ)

ಅಧ್ಯಕ್ಷರು:– Mr Patil., ನಾಡಗೌಡರೆ, ಈಗಾಗಲೇ ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಿಯಮ 69 ರಲ್ಲಿ ಇದರ ಬಗ್ಗೆ ಚರ್ಚೆಗೆ

ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅದು ಒಂದೇ ನೋಟಿಸ್. ಪುನಃ ನೀವು ಅದನ್ನೇ repeat ಮಾಡುತ್ತಿದ್ದರೆ, ಅದಕ್ಕೆ ಅರ್ಥವಿದೆಯೇ? ಈಗ ಬೇಡಿಕೆಯ ಮೇಲೆ ಚರ್ಚೆ ತೆಗೆದುಕೊಳ್ಳೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸರ್, ಒಂದೇ ಒಂದು ವಿಷಯ, ನಡಹಳ್ಳಿಯವರು...

ಅಧ್ಯಕ್ಷರು:– ಬೇಡ ಮಹರಾಯರೆ, ಏಕೆ ಸುಮ್ಮನೆ ಮಾತನಾಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅಧ್ಯಕ್ಷರೆ, ತಾವು ಈ ವಿಷಯವನ್ನು ಸ್ಪಷ್ಟಪಡಿಸಿಬಿಡಿ. ಮಾನ್ಯ ರಮೇಶ್‌ಕುಮಾರ್‌ರವರು ಆಡಳಿತ ಪಕ್ಷದವರು ನಿಲುವಳಿ ಸೂಚನೆ ಕೊಡುವುದರ ಬಗ್ಗೆ ಪ್ರಸ್ತಾಪ ಮಾಡಿದರು. ಆಡಳಿತ ಪಕ್ಷದವರು ನಿಲುವಳಿ ಸೂಚನೆಯನ್ನು ಕೊಡಬಾರದು ಎಂದು ಎಲ್ಲಾದರೂ ಇದೆಯೇ? ಸತ್ಸಂಪ್ರದಾಯವೇನು? ಸಂಪ್ರದಾಯವೇನು? ಇದರ ಬಗ್ಗೆ ನೀವು ಸ್ವಲ್ಪ ಬೆಳಕು ಚೆಲ್ಲಿದರೆ ಚೆನ್ನಾಗಿರುತ್ತದೆ. ಈ ಬಗ್ಗೆ ಸ್ವಲ್ಪ ಸ್ಪಷ್ಟತೆ ಸದನದಲ್ಲಿ ಮೂಡಬೇಕು.

(ಗೊಂದಲ)

ಅಧ್ಯಕ್ಷರು:– ಈ ಬಗ್ಗೆ rule ನಲ್ಲಿ ಇಲ್ಲ ಮಹರಾಯರೆ,

(ಗೊಂದಲ)

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಕಾಗೇರಿಯವರೆ, ಸಂವಿಧಾನದಲ್ಲಿ ಪಕ್ಷಗಳ ಪ್ರಸ್ತಾಪವೇ ಇಲ್ಲ. There is no reference to political parties in constitution. It is a convention of the House. Generally, ಆಡಳಿತ ಪಕ್ಷದವರು ನಿಲುವಳಿ ಸೂಚನೆ ಪ್ರಸ್ತಾವನೆ ಮಾಡುವುದಿಲ್ಲ, ಅದು ನಿಮಗಿರುವ ಅಸ್ತ್ರ. ಇದರ ಅರಿವು ನಮಗಿರಬೇಕು ಎಂದು ಹೇಳಿದೆ. It is not a rule. It is a convention.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಜೆ.ಟಿ. ಪಾಟೀಲರು ನೋಡದೆ ಸಹಿ ಮಾಡಿದೆ, ಹಾಗಾಗಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಡಿ ಎಂದು ಹೇಳಿದರೆ ಏನರ್ಥ ಇದೆ? ನೋಡದೆ ಸಹಿ ಮಾಡಿದೆ ಎಂದು ಒಬ್ಬ ಶಾಸಕರು ಹೇಳಲಿಕ್ಕಾಗುತ್ತದೆಯೇ? ಈ ರೀತಿ ಹೇಳಿದರೆ ಅದು ಈ ಸದನದಲ್ಲಿ ಏನು ಪರಿಣಾಮ ಬೀರುತ್ತದೆ?

(ಗೊಂದಲ)

ಶ್ರೀ ಜೆ.ಟಿ. ಪಾಟೀಲ್:– ನನಗೆ ಬೇಜವಾಬ್ದಾರಿ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ವಿಚಾರದಿಂದ ಆಡಳಿತ ಪಕ್ಷದ ಸದಸ್ಯರಲ್ಲಿ ಗೊಂದಲಗಳು ಆಗುತ್ತಿವೆ ಎಂದು ಸದನದಲ್ಲಿ ಬಹಿರಂಗವಾಗುತ್ತಿದೆ.

(ಗೊಂದಲ)

ಶ್ರೀ ಜೆ.ಟಿ. ಪಾಟೀಲ್:– ನನ್ನ ಪಕ್ಕದಲ್ಲಿ ಕುಳಿತಿರುವ ನಮ್ಮ ಸ್ನೇಹಿತರನ್ನು ನಾನು ಏನು ಹೇಳಿದ್ದೇನೆಂಬ ಬಗ್ಗೆ ನಮ್ಮ ಸ್ನೇಹಿತರನ್ನು ಕೇಳಿ.

(ಗೊಂದಲ)

ಅಧ್ಯಕ್ಷರು:– ಪಾಟೀಲ್, ಮಾಡಿರುವ ತಪ್ಪಿಗೆ ಕ್ಷಮೆ ಕೇಳಿ ಕುಳಿತುಕೊಳ್ಳಿ, ಅದು ಬಿಟ್ಟು ವಾದ ಮಾಡಬೇಡಿ, ಸಾಕು ಕುಳಿತುಕೊಳ್ಳಿ.

ಅಧ್ಯಕ್ಷರು:– ಬಸವರಾಜ ಬೊಮ್ಮಾಯಿ ಬೇಡಿಕೆ ಮೇಲೆ ಚರ್ಚೆ ಪ್ರಾರಂಭಿಸಿ, ಸ್ವಲ್ಪ short ಆಗಿ ಮಾತನಾಡಿ.